ಶ್ರೀ ಎಂ. ನಾಗಪ್ಪ.—ಬಾವಿಗಳನ್ನು ತೆಗೆಯುವುದಕ್ಕೆ ಮುಂಚೆ ಅಲ್ಲಿ ನೀರು ಬೀಳುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಜಿಯಾಲಾಜಿಕಲ್ ಇಲಾಖೆಯವರಿಂದ ಸರ್ವೆ ಮಾಡಿಸಿ, ಪ್ರಯೋಗ ಮಾಡಿಸುವುದಿಲ್ಲವೇ ?

ಶ್ರೀ ಬಿ. ಎಲ್. ಗೌಡ.—ಎಷ್ಟೋ ಸಂದರ್ಭಗಳಲ್ಲಿ ಜಿಯಾಲಾಜಿಸ್ಟ್ ಇಲಾಖೆಯವರು ಎಗ್ಸಾಮಿನ್ ಮಾಡಿ ಅಲ್ಲಿ ನೀರು ಬರುತ್ತದೆ ಬಾವಿಯನ್ನು ತೆಗೆಯಿರಿ ಎಂದು ಹೇಳಿದ ಮೇಲೆ ಬಾವಿಗಳನ್ನು ತೆಗೆದರೂ ಕೂಡ ನೀರು ಸಿಕ್ಕದೇ ಇರತಕ್ಕ ಸಂದರ್ಭಗಳು ಇವೆ. ಆದ್ದರಿಂದ ಈ ವಿಚಾರದಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ.

Collection of fees on paddy and other Foodgrains

228. **Sri H. D. DEVEGOWDA** (Holenarasipur).—

Will the Minister for Development be pleased to state :—

(*a*) whether any representation has been received from the Public of Holenarasipur Taluk that the Taluk Regulated Market Committee is collecting fees on paddy and other foodgrains which comes to Holenarsipur Town for Milling purpose for domestic consumption ;

(*b*) whether any Market Yard has been fixed and if so, the area so fixed ;

(*c*) whether there is any provision to fix the entire area within the Municipal boundary as market area ;

(*d*) whether the Government would take necessary steps not to collect any fees on food articles which come for milling purpose and also to fix the correct Market Yard ?

A.—**Sri B. L. GOWDA** (Deputy Minister for Co-operation).—

(*a*) Yes.

(*b*) No.

(*c*) Yes.

(*d*) The suggestion to exempt food articles from the levy of tax is not acceptable as fees are collected only on Paddy and Ragi. Action is being taken to acquire necessary land for establishment of Market Yard.

ಉತ್ತರದಲ್ಲಿ ಸ್ವಲ್ಪ ಮಾರ್ಪಾಡು ಮಾಡಿ ಇಲ್ಲಿ ನಾನು ಹೇಳಬೇಕಾಗಿದೆ. ಅದು ಮೈಸೂರು ಅಗ್ರಿಕಲ್‌ಚರಲ್ ಮಾರ್ಕೆಟಿಂಗ್ ರೆಗ್ಯುಲೇಷನ್ 1966 ಎನ್ನುವ ಕಾನೂನನ್ನು 1968 ನೇ ಮೇ ತಿಂಗಳಲ್ಲೇ ಜಾರಿಗೆ ತರಲಾಗಿದೆ. ಆದುದರಿಂದ ಈ ಹೊಸ ಕಾನೂನಿನಂತೆ ವಾಣಿಜ್ಯ ಮಾಡುವವರು ಏನೂ ತೆರಿಗೆ ಕೊಡಬೇಕಾಗಿಲ್ಲ. ಎಲ್ಲ ತೆರಿಗೆಗಳೂ ಕೊಳ್ಳುವವರಮೇಲೆ ಬೀಳುತ್ತದೆ. ಇನ್ನು ಮುಂದೆ ರೈತರಿಗೆ ತೊಂದರೆಯಾಗುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಇದನ್ನು ಯಾವಾಗ ಜಾರಿಗೆ ತಂದಿದ್ದೀರಿ ?

† ಶ್ರೀ ಬಿ. ಎಲ್. ಗೌಡ.—1968 ನೇ ಮೇ ತಿಂಗಳಿಂದ ಜಾರಿಗೆ ಕೊಡಲಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದರಲ್ಲಿ ಕನ್‌ಸಂಷನ್ ಪರ್ಪಸನ್‌ಗೆ ಅಗಲೀ ಇಲ್ಲವೇ ಮಿಲಿಂಗು ಪರ್ಪಸನ್‌ಗೆ ಅಗಲಿ ಜನ ಅವರ ಬತ್ತವನ್ನು ಹೊರಕ್ಕೆ ತೆಗೆದುಕೊಂಡು ಹೋದರೆ ಸುಂಕ ಕೊಡಬೇಕೆಂದು ಈಗಲೂ ವಸೂಲು ಮಾಡುತ್ತಿರುವುದು ಸರಕಾರಕ್ಕೆ ಗೊತ್ತಿದೆಯೇ ? ಹಾಗಿದ್ದರೆ

ಇಲ್ಲಿನ ಅಧಿಕಾರಿಗಳನ್ನು ವಿಚಾರಣೆ ಮಾಡಿ ಇಂತಹ ದೂರುಗಳು ಬಂದಿದ್ದರೆ ಮಾರ್ಕೆಟಿಂಗು ಕಮಿಟಿಯವರು ಏಕೆ ವಸೂಲು ಮಾಡುತ್ತಿದ್ದಾರೆ. ಇದನ್ನು ತಪ್ಪಿಸುತ್ತೀರಾ ?

ಶ್ರೀ ಬಿ. ಎಸ್. ಗೌಡ.—ನಾನಾಗಲೇ ಹೇಳಿದೆ, ಹೊಸ ಕಾನೂನು ರಾಜ್ಯದಲ್ಲಿ ಕಳೆದ ಮೇ ತಿಂಗಳಿಂದ ಜಾರಿಗೆ ಬಂದಿದೆ. ಇದರಂತೆ ವಾರಾಟ ಮಾಡುವವರ ಮೇಲೆ ಸುಂಕ ಬರುವುದಿಲ್ಲ. ಕೊಂಡುಕೊಳ್ಳುವವರ ಮೇಲೆ ಮಾತ್ರ ಬೀಳುತ್ತದೆ. ಮಾನ್ಯ ಸದಸ್ಯರು ಹೇಳುವಂತಹುದು ಏನಾದರೂ ಆಗಿದ್ದರೆ ಇದನ್ನು ವಿಚಾರ ಮಾಡಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ವಾರಾಟ ಮಾಡುವವರ ಮೇಲೆ ಸುಂಕ ಬರುವುದಿಲ್ಲ ಕೊಳ್ಳುವವರು ಮಾತ ಕೊಡಬೇಕು ಎಂದು ಹೇಳಿದಿರಿ. ಆದರೆ ಇಪ್ಪೊತ್ತು ರೆಗ್ಯುಲೇಟೆಡ್ ಮಾರ್ಕೆಟಿಂಗು ಕಮಿಟಿಯವರು ಆಯಾ ಮುನಿಸಿಪಲ್ ಗೇಟಿನ ಬಳಿ ಇರುವ ಮುನಿಸಿಪಾಲಿಟಿಗಳು ಕೀಳರಿಮೆಗಳಿಂದಲೇ ಸುಂಕ ವಸೂಲಿ ಮಾಡುತ್ತಾರೆ. ಇವರು ಊರಿಗೆ ಯಾವ ಗಾಡಿ ಬಂದರೂ ಸರಿ ಅವರಿಂದ ಸುಂಕ ವಸೂಲು ಮಾಡುತ್ತಿದ್ದಾರೆ. ಇದನ್ನು ತಪ್ಪಿಸಲು ಸೂಕ್ತವಾದ ನಿರ್ದೇಶನವನ್ನು ಇಲ್ಲಿನ ಅಧಿಕಾರಿಗಳಿಗೆ ಕೊಡುತ್ತೀರಾ ?

ಶ್ರೀ ಬಿ. ಎಸ್. ಗೌಡ.—ಊರಿನೊಳಕ್ಕೆ ಬರುವ ಗಾಡಿಗೆ ಸುಂಕ ಇಲ್ಲ. ಹಾಗೇನಾದರೂ ಸುಂಕ ವಸೂಲು ಮಾಡುತ್ತಿದ್ದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ಹೊಸ ಆಕ್ಟ್ ಪ್ರಕಾರ ರೈತ ಕೊಡಬೇಕಾಗಿ ಇಲ್ಲ ಎಂದು ಹೇಳಿದಿರಿ. ಆದರೆ ತಪ್ಪಿಗೆ ಯಾರ್ಡು ಎಂದು ಡಿಫೈನು ಮಾಡುವಾಗ ನಿಯಮಾವಳಿಯ ಕಾನೂನಿನ ಡೆಫಿನಿಷನ್ ಪ್ರಕಾರ ಮುನಿಸಿಪಾಲಿಟಿಯ ಎಂಟ್ರೆನ್ಸ್ ಏರಿಯಾ ಬರುತ್ತದೆ ಸೆಕ್ಷನ್ 6 ರ ಪ್ರಕಾರ. ಆದುದರಿಂದ ಇಲ್ಲಿ ಬೆಳೆಯುವವರು ಹಾಗೂ ಕೊಳ್ಳುವವರು ಯಾರು ಎನ್ನುವ ವ್ಯತ್ಯಾಸವೇ ಇಲ್ಲ. ಇಲ್ಲಿ ಹಣವನ್ನು ಇವೊತ್ತಿಗೂ ವಸೂಲು ಮಾಡುತ್ತಿದ್ದಾರೆ. ಇದನ್ನು ತಡೆಗಟ್ಟಲು ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಬಿ. ಎಸ್. ಗೌಡ.—ವಸೂಲು ಮಾಡುತ್ತಿದ್ದರೆ ಖಂಡಿತ ಇದನ್ನು ತಡೆಗಟ್ಟುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ರೈತ ತೆಗೆದುಕೊಂಡು ಬರುವ ಮಾಲನ್ನು ವ್ಯಾಪಾರಸ್ಥರು ಬಹಳ ಬುದ್ಧಿವಂತಿಕೆಯಿಂದ ಇದರ ಪೂರ್ತಿ ಲೆಕ್ಕಾಚಾರ ಮಾಡಿಕೊಂಡೇ ಅಲ್ಲವೇ ಮಾರುವುದಕ್ಕೆ ತರುವುದೂ ಇದರ ಮೇಲೆ ಸುಂಕ ಕೊಂಡುಕೊಳ್ಳುವವರ ಮೇಲೆ ಬರುತ್ತದಲ್ಲವೇ ?

ಶ್ರೀ ಬಿ. ಎಸ್. ಗೌಡ.—ವ್ಯಾಪಾರಸ್ಥರು ಬುದ್ಧಿವಂತಿಕೆ ಮಾಡಿದರೆ ಅದರ ಮೇಲೆ ನಾವೇನು ಮಾಡುವುದು ? ಮಾರುವವರ ಮೇಲೆ ಬೀಳುವುದಿಲ್ಲ ಎಂದು ಹೇಳಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ರೆಗ್ಯುಲೇಟೆಡ್ ಮಾರ್ಕೆಟಿಂಗು ಕಮಿಟಿ ಕಾನೂನು ಬಂದಂದಿನಿಂದ ಹೊಸ ರೂಲ್ಸು ಮಾಡಿರುವುದರಿಂದ ಅನೇಕ ಜನರಿಗೆ ತೊಂದರೆಯಾಗುತ್ತಿದೆ ಎಂದು ಸರಕಾರಕ್ಕೆ ಅನೇಕ ದೂರುಗಳು ಬರುತ್ತಿವೆ. ಆದುದರಿಂದ ಇನ್ನು ಮುಂದಾದರೂ ಇದನ್ನು ಸರಿಪಡಿಸಿ ಈಗ ವಸೂಲಾಗುತ್ತಿರುವ ಸುಂಕವನ್ನು ತಪ್ಪಿಸಲು ತಕ್ಕ ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಬಿ. ಎಸ್. ಗೌಡ.—ಇದನ್ನು ಮೇ ತಿಂಗಳಲ್ಲಿ ಜಾರಿಗೆ ಕೊಡಲಾಗಿದೆ ಇದರಲ್ಲಿ ಏನು ಲೋಪದೋಷಗಳಿವೆ ಎನ್ನುವುದನ್ನು ಈಗಲೇ ಹೇಳುವುದಕ್ಕಾಗುವುದಿಲ್ಲ.

Electrification of Villages in Bidar District

229. **Sri V. N. PATIL** (Humnabad).—

Will the Chief Minister be pleased to state :—

(*a*) the number of villages in Bidar District electrified so far under the Rural Electrification Scheme (information may be given talukawise with the names of the villages);